ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
ಭಾರತೀಯ ಮಾನಕ ಬ್ಯೂರೋ IS / ISO 9001 : 2008
BUREAU OF INDIAN STANDARDS QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ Pers / SBF / 2019-20

ದಿನಾಂಕ :
Date 3/04/2020

## ಸುತ್ತೋಲೆ – 25

ಸಂಸ್ಥೆಯ ಉದ್ಯೋಗಿಗಳು ಮಾರಣಾಂತಿಕ ಖಾಯಿಲೆಗಳಿಗೆ ಸಂಬಂಧಿಸಿದಂತೆ ಒಳರೋಗಿಗಳಾಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಸಂಸ್ಥೆಗೆ ಸಲ್ಲಿಸಿ ಅರ್ಹವಿರುವ ಮೊತ್ತವನ್ನು ಮರುಪಾವತಿ ಪಡೆದ ನಂತರ ವ್ಯತ್ಯಾಸದ ಮೊತ್ತದ ಮರುಪಾವತಿ ಪಡೆಯಲು ಕ.ರಾ.ಹ.ಸಂ.ನೌಕರರ ಕ್ಷೇಮ ನಿಧಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಈ ವಿಷಯವಾಗಿ ಕೆಲವು ಉದ್ಯೋಗಿಗಳು ಬಹಳ ವಿಳಂಬವಾಗಿ ಕ.ರಾ.ಹ.ಸಂ.ನೌಕರರ ಕ್ಷೇಮ ನಿಧಿಗೆ ಅರ್ಜಿಗಳನ್ನು ಸಲ್ಲಿಸುತ್ತಿರುವುದನ್ನು ದಿನಾಂಕ 26-02-2020 ರಂದು ಜರುಗಿದ ಕ.ರಾ.ಹ.ಸಂ.ನೌಕರರ ಕ್ಷೇಮ ನಿಧಿ ಸಭೆಯಲ್ಲಿ ಚರ್ಚಿಸಲಾಯಿತು. ಈ ರೀತಿ ವಿಳಂಬವಾಗಿ ಸಲ್ಲಿಸುವ ಬಿಲ್ಲುಗಳನ್ನು ಪರಿಶೀಲಿಸುವಾಗ ಅನೇಕ ತೊಂದರೆಗಳು ಎದುರಾಗುತ್ತಿರುವುದನ್ನು ಸಭೆಯು ಗಮನಿಸಿತು. ಆದುದರಿಂದ ಇನ್ನು ಮುಂದೆ ವೈದ್ಯಕೀಯ ವೆಚ್ಚದ ವ್ಯತ್ಯಾಸದ ಮೊತ್ತದ ಮರುಪಾವತಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ನೌಕರರ ಕ್ಷೇಮ ನಿಧಿಗೆ ಬಿಲ್ಲುಗಳನ್ನು ಸಲ್ಲಿಸಲಿಚ್ಛಿಸುವ ಉದ್ಯೋಗಿಗಳು ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಸಂಸ್ಥೆಗೆ ಸಲ್ಲಿಸಿ ಅರ್ಹ ಮೊತ್ತ ನಿಯಂತ್ರಣ ವಿಭಾಗದಿಂದ ಮರುಪಾವತಿಯಾದ ದಿನದಿಂದ ಗರಿಷ್ಠ 60 ದಿನಗಳೊಳಗಾಗಿ ಸಲ್ಲಿಸತಕ್ಕದೆಂದು ಸಭೆಯು ಸೂಚಿಸಿತು ಹಾಗೂ ಈ ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕೂಡ ಅಭಿಪ್ರಾಯಪಟ್ಟಿರುತ್ತದೆ.

ಆದುದರಿಂದ ಇನ್ನು ಮುಂದೆ ಉದ್ಯೋಗಿಗಳು ಮಾರಣಾಂತಿಕ ಖಾಯಿಲೆಗಳಿಗೆ ಸಂಬಂಧಿಸಿದಂತೆ ಒಳರೋಗಿಗಳಾಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಸಂಸ್ಥೆಗೆ ಸಲ್ಲಿಸಿ ಅರ್ಹ ಮೊತ್ತ ಮರುಪಾವತಿ ಪಡೆದು ವ್ಯತ್ಯಾಸದ ಮೊತ್ತ ಮರುಪಾವತಿ ಕೋರಿ ಕ.ರಾ.ಹ.ಸಂ.ನೌಕರರ ಕ್ಷೇಮ ನಿಧಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಮೇಲೆ ವಿವರಿಸಿರುವ ಕಾಲ ಮಿತಿಯೊಳಗೆ ಸಲ್ಲಿಸಲು ಕ್ರಮ ವಹಿಸಬೇಕೆಂದು ಸೂಚಿಸಿದೆ.

Bhav... 30/3/2020
ಅಧ್ಯಕ್ಷರು
ಕ.ರಾ.ಹ.ಸಂಸ್ಥೆ ನೌಕರರ ಕ್ಷೇಮ ನಿಧಿ ಟ್ರಸ್ಟ್

ಗೆ,
ಎಲ್ಲಾ ಶಾಖಾ ಕಛೇರಿಗಳಿಗೆ / ಎಲ್ಲಾ ಆ ಲೆ ಪ ಕೋಶಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು – II
ವ್ಯವಸ್ಥಾಪಕ ನಿದೇಶಕರವರ ಕಛೇರಿಗೆ ) ಘನ ಮಾಹಿತಿಗಾಗಿ
ಅಧ್ಯಕ್ಷರು : ಕರಾಹಸಂ. ಅಧಿಕಾರಿಗಳ / ನೌಕರರ / ಪ.ಜಾತಿ ಮತ್ತು ಪ.ಪಂ ನೌಕರರ ಸಂಘ
ಕಛೇರಿಯ ಪ್ರತಿ / ಗ್ರಂಥಾಲಯ / ಸೂಚನಾ ಫಲಕಕ್ಕೆ

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ಫ್ಯಾಕ್ಸ್ : 080-22250126 ಇ-ಮೇಲ್ : info@ksfc.in ವೆಬ್ : www.ksfc.in
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bangalore-560 052.
Telephone : Gen : 22263322, Fax : 080-22250126, e-mail : info@ksfc.in Website : www.ksfc.in

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ: ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ Pers/SBF/2019-20

ದಿನಾಂಕ:
Date 3/04/2020

ಸಿಬ್ಬಂದಿ ಪ್ರಕಟಣೆ ಸಂಖ್ಯೆ – 24

ವಿಷಯ :ಕರಾಹಸಂ.ನೌಕರರ ಕ್ಷೇಮ ನಿಧಿಯ ನಿಯಮಾವಳಿಗಳಿಗೆ ತಂದಿರುವ ತಿದ್ದುಪಡಿಗಳ ಕುರಿತು.

----

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ನೌಕರರ ಕ್ಷೇಮ ನಿಧಿ ಟ್ರಸ್ಟ್‌ನ ನಿಯಮಾವಳಿಗಳಿಗೆ ಈ ಕೆಳಕಂಡ ತಿದ್ದುಪಡಿಗಳನ್ನು ತರಲು ಕರಾಹಸಂ.ನೌಕರರ ಕ್ಷೇಮ ನಿಧಿಯ ಸಭೆಯು ದಿನಾಂಕ 30-07-2019 ರಂದು ಅನುಮೋದಿಸಿರುತ್ತದೆ. ಈ ತಿದ್ದುಪಡಿಗಳಿಗೆ ಆದಾಯ ತೆರಿಗೆ ಇಲಾಖೆಯು ದಿನಾಂಕ 02-01-2020 ರಂದು ತನ್ನ ಅನುಮೋದನೆಯನ್ನು ನೀಡಿರುತ್ತದೆ. ಅದರಂತೆ ಕರಾಹಸಂ.ನೌಕರರ ಕ್ಷೇಮ ನಿಧಿಯ ನಿಯಮಾವಳಿಗಳಿಗೆ ತಂದಿರುವ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ದಿನಾಂಕ 11ನೇ ಮಾರ್ಚ್ 2020 ರಂದು Supplemental Trust Deed ಅನ್ನು ನೋಂದಣಿ ಮಾಡಿಸಲಾಗಿದೆ.

ಕರಾಹಸಂ.ನೌಕರರ ಕ್ಷೇಮ ನಿಧಿಗೆ ತಂದಿರುವ ತಿದ್ದುಪಡಿಗಳು ಈ ಕೆಳಕಂಡಂತಿವೆ.

1. ಸೇವೆಯಲ್ಲಿದ್ದಾಗ ಅಕಾಲಿಕ ಮರಣಕ್ಕೀಡಾಗುವ ಉದ್ಯೋಗಿಯ ಮರಣೋತ್ತರ ವಿಧಿ ವಿಧಾನಗಳನ್ನು ಪೂರೈಸಲು ಮರಣದ ದಿನ ಉದ್ಯೋಗಿಯ ನಾಮ ನಿರ್ದೇಶಿತರು / ಅವಲಂಬಿತರಿಗೆ ಪ್ರಸ್ತುತ ನೀಡಲಾಗುತ್ತಿರುವ ರೂ.20,000/- ಗಳನ್ನು ರೂ.50,000/- ಗಳಿಗೆ ಹೆಚ್ಚಿಸಲಾಗಿದೆ.

2. ಸೇವೆಯಲ್ಲಿದ್ದಾಗ ಅಕಾಲಿಕ ಮರಣಕ್ಕೀಡಾಗುವ ಉದ್ಯೋಗಿಯ ನಾಮ ನಿರ್ದೇಶಿತರು / ಅವಲಂಬಿತರಿಗೆ ಪ್ರಸ್ತುತ ಪರಿಹಾರ ಧನವಾಗಿ ನೀಡುತ್ತಿರುವ ಮೊತ್ತ ರೂ.2.00 ಲಕ್ಷಗಳನ್ನು ರೂ. 3.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

3. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ನೌಕರರ ಕ್ಷೇಮ ನಿಧಿ ಟ್ರಸ್ಟ್‌ನ ವತಿಯಿಂದ 15 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿ ಸಂಸ್ಥೆಯಿಂದ ವಯೋ ನಿವೃತ್ತಿ / ಸ್ವಯಂ ನಿವೃತ್ತಿ ಹೊಂದುವ ನೌಕರರಿಗೆ ಸ್ಮರಣ ಕಾಣಿಕೆಯಾಗಿ ಪ್ರಸ್ತುತ ನೀಡಲಾಗುತ್ತಿರುವ ನಗದು ರೂ.15,000/- ಗಳನ್ನು ರೂ.25,000/- ಗಳಿಗೆ ಹೆಚ್ಚಿಸಲಾಗಿದೆ.

ಈ ತಿದ್ದುಪಡಿಗಳು ದಿನಾಂಕ 01-07-2019 ರಿಂದ ಜಾರಿಗೆ ಬರುತ್ತವೆ. ಮೇಲಿನ ತಿದ್ದುಪಡಿಗಳನ್ನು ಹೊರತುಪಡಿಸಿ ಕರಾಹಸಂ.ನೌಕರರ ಕ್ಷೇಮ ನಿಧಿಯ ನಿಯಮಗಳಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ.

30/03/2020
ಅಧ್ಯಕ್ಷರು
ಕ.ರಾ.ಹ.ಸಂಸ್ಥೆಯ ನೌಕರರ ಕ್ಷೇಮ ನಿಧಿ ಟ್ರಸ್ಟ್

ಗೆ,
ಎಲ್ಲಾ ಶಾಖಾ ಕಛೇರಿಗಳಿಗೆ / ಎಲ್ಲಾ ಆ ಲೆ ಪ ಕೋಶಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು – II
ವ್ಯವಸ್ಥಾಪಕ ನಿದೇಶಕರವರ ಕಛೇರಿಗೆ ) ಘನ ಮಾಹಿತಿಗಾಗಿ
ಅಧ್ಯಕ್ಷರು : ಕರಾಹಸಂ. ಅಧಿಕಾರಿಗಳ / ನೌಕರರ / ಪ.ಜಾತಿ ಮತ್ತು ಪ.ಪಂ ನೌಕರರ ಸಂಘ
ಕಛೇರಿಯ ಪ್ರತಿ / ಗ್ರಂಥಾಲಯ / ಸೂಚನಾ ಫಲಕಕ್ಕೆ

ಪ್ರಧಾನ ಕಛೇರಿ: ಕೆ.ಎಸ್.ಎಫ್.ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052
ದೂರವಾಣಿ ಸಂಖ್ಯೆ ಸಾಮಾನ್ಯ: 22263322 ಫ್ಯಾಕ್ಸ್: 080-22250126 ಇ-ಮೇಲ್: info@ksfc.in ವೆಬ್: www.ksfc.in
HEAD OFFICE: KSFC Bhavan, No. 1/1, Thimmaiah Road, Near Cantonment Railway Station, Bengaluru - 560 052
Telephone: Gen: 22263322 Fax: 080-22250126 e-mail: info@ksfc.in Website: www.ksfc.in